# ಹೇರ್‌ಡೈ ಜೈ ಜೈ

**ತಲೆಗೂದಲು ಅಕಾಲಿಕವಾಗಿ ಬಿಳಿಯಾಗುವುದನ್ನು ತಡೆಯಲು ಹೇರ್‌ಡೈ ಮೊರೆ ಹೋಗುವುದು, ಫ್ಯಾಷನ್‌ಗಾಗಿ ತಲೆಗೂದಲನ್ನು ಸ್ಟ್ರೈಟ್ ಮಾಡಿಕೊಳ್ಳುವುದು ಅನಾರೋಗ್ಯಕ್ಕೆ ದಾರಿ ಮಾಡಿಕೊಡುತ್ತದೆ. ಇದರಲ್ಲಿರುವ ರಾಸಾಯನಿಕಗಳು ಮಾರಕರೋಗಕ್ಕೆ ನಾಂದಿ ಹಾಡುತ್ತದೆ ಎಂಬುದು ಅಧ್ಯಯನದಿಂದ ಸಾಬೀತಾಗಿದೆ.**

**■ ಉಮಾ ಅನಂತ್**

ಅಶ್ವಿನಿಗೆ ವಯಸ್ಸು 25, ಚಿಕ್ಕ ವಯಸ್ಸಿನಿಂದಲೂ ಈಕೆಗೆ ನೀಳ ತಲೆಗೂದಲೇ. ದಿನನಿತ್ಯ ಎಣ್ಣೆಹಾಕಿ ಬಾಚಿ ಉದ್ದದ ಜಡೆ ಕಟ್ಟಿಕೊಂಡು ಶಾಲೆಗೆ ಹೋದರೆ ಎಲ್ಲರ ಕಣ್ಣು ಅಶ್ವಿನಿ ತಲೆಗೂದಲ ಮೇಲೆಯೇ. ಇಷ್ಟು ಸೊಂಪಾಗಿ, ಕಪ್ಪಾಗಿ, ನೀಳವಾಗಿ, ರೇಷ್ಮೆಯ ನುಣುಪುಳ್ಳ ತಲೆಗೂದಲು ಈಗೀಗ ಸೊರಗುತ್ತಿದೆ, ಕಪ್ಪು ಕೂದಲ ಮಧ್ಯೆ ಕೆಂಚು, ಬಿಳಿ ಕೂದಲುಗಳು ಬಂದು ಅಂದಗೆಡುತ್ತಿದೆ. ವೃತ್ತಿಗೆ ಸೇರಿದ ಮೇಲೆ ತಲೆಗೂದಲ ಕಾಳಜಿಗೆ ಸಮಯವೇ ಇರದಿರುವುದು ಇದಕ್ಕೆ ಕಾರಣ ಎಂದು ಅಶ್ವಿನಿಯೂ ಸುಮ್ಮನಾಗಿದ್ದರು. ಆದರೆ ಗೆಳತಿಯರ ಸಲಹೆಯಂತೆ ಬಿಳಿಗೂದಲನ್ನು ಕರಿ ಮಾಡುವ ಸಲುವಾಗಿ ಬಣ್ಣ ಬಳಿಯತೊಡಗಿದರು.

ಕೂದಲೇನೋ ಸುಂದರವಾಗಿ ಕಾಣತೊಡಗಿತು. ಆದರೆ ಕೆಲದಿನಗಳಲ್ಲೇ ಆರೋಗ್ಯ ಸಮಸ್ಯೆ ಕಾಡತೊಡಗಿತು. ಆಫೀಸಿನಲ್ಲಿ ಕುಳಿತು ಕೆಲಸ ಮಾಡುವಾಗ ವಿಪರೀತ ಬಳಲಿಕೆ, ಸ್ತನಗಳಲ್ಲಿ ಚುಳುಕ್ ಎಂದು ಆಗಾಗ ನೋವು ಕಾಣಿಸಿಕೊಳ್ಳಲಾರಂಭಿಸಿತು. ತಡಮಾಡದೇ ವೈದ್ಯರ ಬಳಿ ತೆರಳಿದ ಅಶ್ವಿನಿಗೆ ಸ್ತನ ಕ್ಯಾನ್ಸರ್ ಆರಂಭಿಕ ಹಂತದಲ್ಲಿರುವುದು ದೃಢಪಟ್ಟಿತ್ತು.

ಇದು ಅಶ್ವಿನಿ ಒಬ್ಬರ ಕಥೆಯಲ್ಲ. ಇತ್ತೀಚಿನ ಅಧ್ಯಯನವೊಂದರ ಪ್ರಕಾರ ಅಂದಕ್ಕೆಂದು ತಲೆಗೂದಲಿಗೆ ಬಣ್ಣ ಬಳಿಯುವುದು, ಹೇರ್‌ಡೈ ಬಳಸುವುದು ಮಹಿಳೆಯರಿಗೆ ಸ್ತನ ಕ್ಯಾನ್ಸರ್ ಬರಲು ನಾಂದಿ ಹಾಡುತ್ತದೆ ಎಂಬುದು ಸಾಬೀತಾಗಿದೆ.

ರಾಷ್ಟ್ರೀಯ ಆರೋಗ್ಯ ಸಂಸ್ಥೆ (National Institute of Health) ಇತ್ತೀಚೆಗೆ ನಡೆಸಿದ ಅಧ್ಯಯನದ ಸಾರವನ್ನು ವೈದ್ಯಕೀಯ ಜರ್ನಲ್ ಒಂದು ಪ್ರಕಟಿಸಿದ್ದು, ತಲೆಗೂದಲ ಬಣ್ಣ ಹಾಗೂ ಹೇರ್ ಸ್ಟ್ರೈಟ್ ಮಾಡಿಸಿಕೊಳ್ಳುವ ಮಹಿಳೆಯರಿಗೆ ಸ್ತನ ಕ್ಯಾನ್ಸರ್‌ನ ಚಿಹ್ನೆಗಳು

